

ನೀನು? ಏನು ಮಾಡುತ್ತಿದ್ದೀಯ?' ಎಂದು ಕೇಳಿದ.

'ಎಲ್ಲಾ ಚೆನ್ನಾಗಿದೆ. ನಾನು ಈಗ ನೋಟರಿ ಆಗಿದ್ದೇನೆ. ಮೂವತ್ತೈದು ರೂಬೆಲ್ ಪ್ರತಿ ತಿಂಗಳಿಗೆ.'

'ದೇವರ ದಯೆ! ತುಂಬಾ ಸಂತೋಷವಾಯ್ತು ಲುಷ್ಕೋಫ್. ನೋಡು, ಒಂದು ರೀತಿಯಲ್ಲಿ ನೀನು ನನ್ನ ದತ್ತುಮಗನಂತೆ. ನಿನಗೇ ಗೊತ್ತಿರುವ ಹಾಗೆ, ನಾನು ನಿನ್ನನ್ನು ಸರಿಯಾದ ದಾರಿಗೆ ತಂದಿದ್ದೇನೆ. ನಿನ್ನನ್ನು ಹೇಗೆ ಬೈದಿದ್ದೆ ನೆನಪಿದೆಯಾ? ಆ ದಿನ ನೀನು ನನ್ನ ಕಾಲ ಬಳಿ ಕುಸಿದು ಬಿದ್ದಿದ್ದೆ. ನನ್ನ ಮಾತನ್ನು ಮರೆಯದಿದ್ದಕ್ಕೆ ಧನ್ಯವಾದಗಳು, ಹಳೆಯ ಗೆಳೆಯ.'

'ನಿಮಗೂ ನನ್ನ ಧನ್ಯವಾದಗಳು' ಎಂದ ಲುಷ್ಕೋಫ್. 'ಆ ದಿನ ನಾನು ನಿಮ್ಮ ಬಳಿ ಬರದಿದ್ದರೆ, ಇಂದೂ ನನ್ನನ್ನು ನಾನು ಮೇಷ್ಟ್ರು ಎಂದೋ ಅಥವಾ ಒಬ್ಬ ವಿದ್ಯಾರ್ಥಿ ಎಂದೋ ಹೇಳಿಕೊಂಡಿರುತ್ತಿದ್ದೆ. ಹೌದು, ಆ ದಿನ ನಾನು ನಿಮ್ಮ ರಕ್ಷಣೆಯನ್ನು ಒಪ್ಪಿಕೊಂಡದ್ದಕ್ಕೆ ನಾನು ಆ ಕೂಪದಿಂದ ಹೊರಬರಲು ಸಾಧ್ಯವಾಯಿತು.'

'ನನಗಂತೂ ಬಹಳ ಹರ್ಷವಾಯಿತು, ಖಂಡಿತವಾಗಿಯೂ.'

'ನಿಮ್ಮ ದಯೆ ಮತ್ತು ಒಳ್ಳೆಯ ಮಾತಿಗೆ ಧನ್ಯವಾದ. ಆ ದಿನ ಅದ್ಭುತವಾಗಿ ಮಾತನಾಡಿದಿರಿ ನನ್ನ ಜೊತೆ. ನಾನು ಬಹಳ ಕೃತಜ್ಞ ನಿಮಗೆ ಮತ್ತು ನಿಮ್ಮ ಅಡುಗೆಯವಳಾದ ಓಲ್ಗಾಳಿಗೆ. ದೇವರು ಆ ಒಳ್ಳೆಯ ಮತ್ತು ಶ್ರೇಷ್ಠ ಮಹಿಳೆಗೆ ಅನುಗ್ರಹಿಸಲಿ! ನೀವು ಅಂದು ಬಹಳ ಚೆನ್ನಾಗಿ ಮಾತಾಡಿದಿರಿ ಮತ್ತು ಅದಕ್ಕೆ ನಾನು ಸದಾಕಾಲ– ನಾನು ಸಾಯುವವರೆಗೂ– ನಿಮಗೆ ಚಿರಋಣಿ. ಆದರೆ, ನಿಜವಾಗಿ ಹೇಳಬೇಕೆಂದರೆ, ನನ್ನ ಕಾಪಾಡಿದವಳು ಆ ನಿಮ್ಮ ಅಡುಗೆಯವಳು, ಓಲ್ಗಾ.'

'ಅದು ಹೇಗೆ?'

''ಹೀಗೆ. ನಾನು ನಿಮ್ಮ ಮನೆಗೆ ಸೌದೆ ಒಡೆಯಲು ಬಂದಾಗ ಅವಳು ಹೀಗೆ ಹೇಳುತ್ತಿದ್ದಳು: ಓಹ್! ಕುಡಿತದ ವ್ಯಸನಿಯೇ! ಓಹ್, ಪಾಪದ ಪ್ರಾಣಿಯೇ! ನೀನು ನಿನ್ನ ಜೀವನವನ್ನು ಹಾಳುಮಾಡಿಕೊಂಡಿದ್ದೀಯ.' ಇಷ್ಟು ಹೇಳಿ ನನ್ನ ಎದುರು ಕುಳಿತು ಅವಳು ಮತ್ತೆ ನನ್ನ ಮುಖ ನೋಡಿ ದುಃಖಿಸಿ ಅಳುತ್ತಿದ್ದಳು. 'ಅಯ್ಯೋ, ದುರದೃಷ್ಟದವನೇ! ನಿನಗೆ ಈ ಜೀವನದಲ್ಲಿ ಏನೂ ಸುಖವಿಲ್ಲ ಮತ್ತು ಮುಂಬರುವ ಪ್ರಪಂಚದಲ್ಲೂ ನಿನಗೆ ಹಿತವಿಲ್ಲ. ಕುಡುಕನೇ! ನೀನು ನರಕದಲ್ಲಿ ಬೇಯುತ್ತೀಯ, ಓಹ್ ದುಃಖಾತ್ಮನೇ!' ಎನ್ನುತ್ತಾ ಮಾತು ಮುಂದುವರೆಸುತ್ತಿದ್ದಳು.

ಅವಳು ನನಗಾಗಿ ಎಷ್ಟು ದುಃಖಿತಳಾಗಿದ್ದಳು, ನನಗಾಗಿ ಎಷ್ಟು ಕಣ್ಣೀರು ಸುರಿಸುತ್ತಿದ್ದಳು ಎನ್ನುವುದನ್ನು ನಾನು ಮಾತಿನಲ್ಲಿ ಹೇಳಲಾರೆ.

ಆದರೆ ಮುಖ್ಯವಾಗಿ, ಅವಳು ನನಗಾಗಿ ಸೌದೆ ತುಂಡು ಮಾಡುತ್ತಿದ್ದಳು. ನಿಮಗೆ ಗೊತ್ತೇ ಸ್ವಾಮಿ, ನಾನು ಒಂದೇ ಒಂದು ಸೌದೆಯನ್ನೂ ಒಡೆಯಲಿಲ್ಲ, ಎನ್ನುವುದು. ಎಲ್ಲಾ ಅವಳೇ ಮಾಡುತ್ತಿದ್ದಳು. ಇದು ಯಾಕೆ ನನ್ನನ್ನು ಕಾಪಾಡಿತು, ನಾನು ಯಾಕೆ ಬದಲಾದೆ, ನಾನು ಯಾಕೆ ಅವಳ ಮಾತನ್ನು ಕೇಳಿ ಕುಡಿಯುವುದನ್ನು ನಿಲ್ಲಿಸಿದೆ ಎಂದು ವಿವರಿಸಲಾರೆ. ಆದರೆ, ಇಷ್ಟು ಮಾತ್ರ ಗೊತ್ತು – ಅವಳಾಡಿದ ಮಾತುಗಳಿಂದ ಮತ್ತು ಅವಳ ಘನವೆತ್ತ ನಡವಳಿಕೆಯಿಂದ ನನ್ನ ಹೃದಯದಲ್ಲಿ ಒಂದು ಬದಲಾವಣೆಯಾಯ್ತು; ಅವಳು ನನ್ನನ್ನು ಸರಿದಾರಿಗೆ ತಂದಳು ಮತ್ತು ಅದನ್ನು ನಾನೆಂದೂ ಮರೆಯಲಾರೆ. ಆದರೆ, ಈಗ ಹೊರಡುವ ಸಮಯ ಆಯ್ತು; ನೋಡಿ ಗಂಟೆ ಬಾರಿಸಿತು".

ಲುಷ್ಕೋಫ್ ನಮಸ್ಕರಿಸಿ, ಮಹಡಿಯ ತನ್ನ ಸ್ಥಾನದಲ್ಲಿ ಕೂರಲು ಒಳಹೋದ.

ಪ್ರತಿಕ್ರಿಯಿಸಿ: **feedback@sudha.co.in**